KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಷ್ಟ್ರಪತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 6/2/2021

# ಬಿಎಸ್‌ವೈಗೆ ರಾಷ್ಟ್ರಪತಿ ಶಹಬ್ಬಾಸ್‌ಗಿರಿ

6/2/21

ಸಂ.ಕ.ಸಮಾಚಾರ ಬೆಂಗಳೂರು

ಜಗತ್ತಿನಾದ್ಯಂತ ಪೀಡಿಸಿದ ಕೊರೊನಾ ಸೋಂಕಿನ ಸಂಕಷ್ಟದ ನಡುವೆ ವ್ಯವಸ್ಥಿತವಾಗಿ ಏರ್ ಶೋ ನಡೆಸಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಶಂಸನಾರ್ಹ ಎಂದು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಬಣ್ಣಿಸಿದರು.

ಏರ್ ಶೋ ಸಮಾರೋಪದಲ್ಲಿ ಪಾಲ್ಗೊಂಡಿದ್ದ ಅವರು, ಇದು ವಿಶ್ವದಾದ್ಯಂತ ಗಮನ ಸೆಳೆಯುವ ಕಾರ್ಯಕ್ರಮವಾಗಿದೆ. ಸೋಂಕಿನ ತಲ್ಲಣಗಳ ಮಧ್ಯೆ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಸುಲಭದ ಮಾತಲ್ಲ. ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಹಾಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಜಗತ್ತು ತಿರುಗಿ ನೋಡುವ ಕೆಲಸ ಮಾಡಿದ್ದಾರೆ ಎಂದರು.

- **201 ಹೊಸ ಒಪ್ಪಂದಗಳಿಗೆ ಸಹಿ**
- **ರಕ್ಷಣಾ ಉಪಕರಣಗಳ ಬಗ್ಗೆ ಅರಿವು**

ಸಮ್ಮೇಳನದಲ್ಲಿ 201 ಹೊಸ ಪಾಲುದಾರಿಕೆ ವ್ಯವಹಾರಗಳ ಒಪ್ಪಂದಗಳಿಗೆ ಸಹಿಬಿದ್ದಿದೆ. ಕೇಂದ್ರ ರಕ್ಷಣಾ ಸಚಿವರು, ಮುಖ್ಯಮಂತ್ರಿಗಳೊಂದಿಗೆ ರಾಯಭಾರಿಗಳು, ಉಪಸ್ಥಿತರು ಮತ್ತು ಉದ್ಯಮಿಗಳೂ ಸೇರಿದಂತೆ ಯಶಸ್ಸಿಗೆ ಕಾರಣರಾದರೆಲ್ಲರೂ ಅಭಿನಂದನಾರ್ಹರೆಂದು ಎಂದ ಅವರು, ವಿದೇಶಿ ರಾಯಭಾರಿಗಳು ಹಾಗೂ ರಾಜತಾಂತ್ರಿಕ ಗಣ್ಯರು ಭಾರತದ ಸಾಮರ್ಥ್ಯದ ಬಗ್ಗೆ ಹಾಗೂ ರಕ್ಷಣಾ ಉಪಕರಣಗಳ ಉತ್ಪಾದನೆ ಮತ್ತು ಉದ್ಯಮಗಳ ಬಗ್ಗೆ ಅರಿವು ಹೊಂದಿದ್ದಾರೆಂದು ಭಾವಿಸುವುದಾಗಿ ತಿಳಿಸಿದರು.

ಹಿಂದೂ ಮಹಾಸಾಗರದ ವ್ಯಾಪ್ತಿಯಲ್ಲಿ ಸುರಕ್ಷತೆ, ಶಾಂತಿ ಸೌಹಾರ್ದತೆಗಳನ್ನು ವೃದ್ಧಿಸುವು ಮಹೋದ್ದೇಶದಿಂದ ಸೇನಾ ಪ್ರಮುಖರು ಸಮ್ಮೇಳನದಲ್ಲಿ ನಡೆಸಿದ ಸಂವಾದದಲ್ಲಿ 28 ದೇಶಗಳು ಭಾಗವಹಿಸಿದ್ದು ಗಮನಾರ್ಹ.

ವಿಶ್ವಶಾಂತಿಯ ಪ್ರತಿಪಾದಕ ರಾಷ್ಟ್ರವಾಗಿರುವ ಭಾರತ, ಪ್ರಾಕೃತಿಕ ಸಂಪನ್ಮೂಲಗಳಿಂದ ತುಂಬಿರುವ ಹಾಗೂ ದುರ್ಗಮ ಪ್ರದೇಶಗಳಿಂದ ಆವೃತ್ತವಾಗಿರುವ ಹಿಂದೂ ಮಹಾಸಾಗರ ವ್ಯಾಪ್ತಿಯ ರಕ್ಷಣೆಗೆ ಬದ್ಧವಾಗಿದೆ ಎಂದರು.

ಈ ವಲಯದಲ್ಲಿ ಸುರಕ್ಷತೆ, ಪ್ರಗತಿಯನ್ನು ವೃದ್ಧಿಸುವ ಉದ್ದೇಶದಿಂದ ಸಾಗರ್ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ನೆರೆ ರಾಷ್ಟ್ರಗಳೊಂದಿಗೆ ಸಹಕಾರ, ಸೌಹಾರ್ದತೆಗಳೊಂದಿಗೆ ರಾಜಕೀಯ, ಸಾಂಸ್ಕೃತಿಕ ಬಂಧವನ್ನೂ ಬೆಸೆಯುವ ಉದ್ದೇಶ ಹೊಂದಿದೆ ಎಂದು ನುಡಿದರು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸೇನಾ ಮುಖ್ಯಸ್ಥ ಜ.ಬಿಪಿನ್ ರಾವತ್, ರಕ್ಷಣಾ ಉತ್ಪಾದನಾ ಮುಖ್ಯ ಕಾರ್ಯದರ್ಶಿ ರಾಜ್‌ಕುಮಾರ್ ಮತ್ತಿತರರಿದ್ದರು.



ಏರ್ ಶೋ ಸಮಾರೋಪದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೈಮುಗಿದು ಸ್ವಾಗತಿಸಿದರು.

> 48 ಸಾವಿರ ಕೋಟಿ ರೂ. ಮೊತ್ತದ ತೇಜಸ್ ಯುದ್ಧ ವಿಮಾನದ ಬಿಡಿಭಾಗಗಳನ್ನು ತಯಾರು ಮಾಡುವ ಅನುಮತಿ ಎಚ್‌ಎಎಲ್‌ಗೆ ದೊರೆತಿರುವುದು ಸಂತಸ ತಂದಿದೆ. ತಯಾರಕರಾಗಿ ಮತ್ತು ಸ್ವಾವಲಂಬನೆಯ ಪ್ರತೀಕವಾಗಿ ಎಚ್‌ಎಎಲ್ ಕಾರ್ಯ ಮುಂದುವರೆಸುತ್ತಿದೆ..
>
> ■ **ರಾಮನಾಥ್ ಕೋವಿಂದ್** | ರಾಷ್ಟ್ರಪತಿ

## ಏರ್ ಶೋ ಯಶಸ್ಸು